


ಚ ಹು ಬಿ ಚಂದ್ರು

ಕಲೆ: ಮುರಳೀಧರ್ ರಾಥೋಡ್



# ಕವಿಯ ಸಾವು

ಕವಿಯ ನಿಗೂಢ ಸಾವಿನಲ್ಲಿ
ಕವಿತೆಯ ಕೈವಾಡವಿದ್ದಂತೆ ಕಾಣುತ್ತದೆ,
ದೂರಿನಲ್ಲಿ ಹೀಗೊಂದು ಶಂಕೆ;

'ಪದ'ವೇ ಕೈ ಬಿಟ್ಟ ಕವಿಯು
'ಕವಿ'ಯೆಂಬ ಪದನಾಮವ ಹೊರಲಾರದೆ
ಕುಸಿದುಬಿದ್ದಿರಬಹುದೆಂದು
ಸಾಹಿತ್ಯವಲಯದಲ್ಲಿ ಬಿಸಿ ಚರ್ಚೆ;

ಸಂಕಟಗಳನ್ನು ಸುದ್ದಿಯಾಗಿಸಿ
ಸಾಂತ್ವನ ಬಯಸಿದ ಕವಿಯ
ಬ್ಯಾಂಕ್ ಖಾತೆಯ ಸೊನ್ನೆಗಳು
ಕುತ್ತಿಗೆಯನ್ನು ಬಿಗಿಗೊಳಿಸಿರಬಹುದೆಂಬುದು
ಸ್ಥಳೀಯರ ತೀರ್ಪು;

ಕಂಠಪೂರ್ತಿ ಕವಿತೆಗಳನ್ನಷ್ಟೆ ಕುಡಿದು
ನಶೆಯಲ್ಲಿದ್ದ ಕವಿಯ ಮೇಲೆ
ಸೋಶಿಯಲ್ ಮೀಡಿಯಾ ಹರಿದು
ಸಾವನ್ನಪ್ಪಿರಬಹುದೆಂದು
ಸಂತಾಪ ಸಭೆಯ ಸಭಾಧ್ಯಕ್ಷರ ಅನಿಸಿಕೆ;

ಕವಿಯ ಸಾವನ್ನು ಸಂಭ್ರಮಿಸಿದ ಕವಿತೆಗಳು
ಶ್ರದ್ಧಾಂಜಲಿ ಸಭೆಯ ಕೊನೆಯ ಆಸನಗಳಲ್ಲಿ
ಬಿಕ್ಕಳಿಸುವುದನ್ನು ಕಂಡು
ಕವಿಯ ಆತ್ಮ ನಕ್ಕಿತು;
ಕವಿಯಿದ್ದ ಕೇರಿಯಲ್ಲಿ ಬೆಳಕಿತ್ತು.